ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಸಚಿವರು) :ಬೃಹತ್ ಮತ್ತು ಮಾಧ್ಯಮ ಕೈಗಾರಿಕಾ ಸಚಿವರ ಪರವಾಗಿ

ಅ) ಇಲ್ಲ

ಆ) ಸದರಿ ಕಂಪನಿಯು 1997-98 ಮತ್ತು 1998-99ರಲ್ಲಿ ಕ್ರಮವಾಗಿ ರೂ. 342.43 ಹಾಗೂ 365.65 ಲಕ್ಷಗಳಷ್ಟು ಮಾತ್ರ ನಷ್ಟವನ್ನು ಅನುಭವಿಸಿದೆ. ಇದಕ್ಕೆ ಕಾರಣಗಳು ಕೆಳಗಿನಂತಿವೆ:

1) ಪರಿವರ್ತಕಗಳ ಬೇಡಿಕೆ ಕಡಿಮೆಯಾಗಿದ್ದುದು.

2) ಪರಿವರ್ತಕಗಳಿಗೆ ಕಡಿಮೆ ಬೆಲೆ ನೀಡಿರುವುದು.

3) ಕೆಪಿಟಿಸಿಎಲ್ ಬೆಲೆ ಆಧ್ಯತೆ ನೀಡದಿದ್ದುದು.

ಇ) ಪ್ರಶ್ನೆಯು ಉದ್ಭವಿಸುವುದಿಲ್ಲ

ಈ) ಕಾರ್ಖಾನೆಯು ಸಧ್ಯದಲ್ಲಿ ತನ್ನ ಉಪಕರಣಗಳನ್ನು ಕೆ.ಪಿ.ಟಿ.ಸಿ.ಎಲ್.ಗೆ ಅದರ ಬೇಡಿಕೆಯನುಸಾರ ಸರಬರಾಜು ಮಾಡುತ್ತದೆ. ತನ್ನ ಉತ್ಪಾದಕತೆಯ ಗುಣಮಟ್ಟವನ್ನು ಪೂರೈಸಲು ಕಾರ್ಯನಿರತವಾಗಿ ಜೂನ್ 30, 2000 ರಂದು ಅಂತರ್‌ರಾಷ್ಟ್ರೀಯ ಗುಣಮಟ್ಟದ ಐ.ಎಸ್.ಒ. 9002 ಪ್ರಮಾಣ ಪತ್ರಪಡೆದಿದೆ. ಪ್ರಸ್ತುತ ಅಂತರ್‌ರಾಷ್ಟ್ರೀಯ ಗುಣಮಟ್ಟದ ಐ.ಎಸ್.ಒ. 9001 (ವಿನ್ಯಾಸಕ್ಕೆ ಸಂಬಂಧ ಪಟ್ಟಂತೆ) ಮತ್ತು ಐ.ಎಸ್.ಒ. 14001 (ಪರಿಸರಕ್ಕೆ) ಸಂಬಂಧಪಟ್ಟಂತೆ) ಪ್ರಮಾಣ ಪತ್ರಗಳನ್ನು ಗಳಿಸಲು ಕಾರ್ಯನಿರತವಾಗಿದೆ. ಇದಲ್ಲದೆ ವೆಚ್ಚವನ್ನು ತಗ್ಗಿಸಲು ಕಾರ್ಖಾನೆಯಲ್ಲಿ ಸ್ವಯಂ ನಿವೃತ್ತಿ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ.

ಎನ್.ಜಿ.ಇ.ಎಫ್ ಕಾರ್ಖಾನೆಯು ನಷ್ಟದಲ್ಲಿರುವ ಬಗ್ಗೆ

2798 (3848) ಶ್ರೀ ಆರ್. ಅಶೋಕ್ (ಉತ್ತರಹಳ್ಳಿ) : ಮಾನ್ಯ ಬೃಹತ್ ಮತ್ತು ಮಾಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇದುವರೆವಿಗೂ ಎನ್.ಜಿ.ಇ.ಎಫ್. ಕಾರ್ಖಾನೆಯಿಂದಾಗಿರುವ ನಷ್ಟದ ಮೊತ್ತ ಎಷ್ಟು;

ಆ) ನಷ್ಟದಲ್ಲಿರುವ ಕಾರ್ಖಾನೆಯನ್ನು ಪುನ:ಶ್ಚೇತನಕ್ಕಾಗಿ ನೇಮಕ ಮಾಡಲಾಗಿದ್ದ ಸಮಿತಿಗಳು ಯಾವುವು, ಸಮಿತಿಗಳ ವರದಿ ಏನು ಅವುಗಳನ್ನು ಕಾರ್ಯಗತಗೊಳಿಸಲು ಸರ್ಕಾರ ಕೈಗೊಂಡಿರುವ ತೀರ್ಮಾನವೇನು;

ಇ) ನಷ್ಟದಲ್ಲಿರುವ ಈ ಕಾರ್ಖಾನೆಯನ್ನು ಸರ್ಕಾರ ಖಾಸಗೀಕರಣಗೊಳಿಸಲು ತೀರ್ಮಾನಿಸಿದೆಯೇ; ಇಲ್ಲದಿದ್ದಲ್ಲಿ ಇದರ ಪುನ:ಶ್ಚೇತನಕ್ಕಾಗಿ ಸರ್ಕಾರ ಹಮ್ಮಿಕೊಂಡಿರುವ ಕಾರ್ಯಯೋಜನೆಗಳಾವುವು?

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ಇಲಾಖೆ ಸಚಿವರು) : ಬೃಹತ್ ಮತ್ತು ಮಾಧ್ಯಮ ಕೈಗಾರಿಕಾ ಸಚಿವರ ಪರವಾಗಿ

ಅ) ಎನ್.ಜಿ.ಇ.ಎಫ್. ಕಾರ್ಖಾನೆಗೆ ದಿನಾಂಕ 31-3-2000ರ ವರೆಗೆ ಆಗಿರುವ ಒಟ್ಟು ನಷ್ಟ ರೂ. 222.90 ಕೋಟಿಗಳು.

ಆ) ಸದರಿ ಕಂಪನಿಯ ಕಾರ್ಯಾಚರಣೆಯನ್ನು ಪರಿಶೀಲನೆ ಮಾಡಿ ಕಂಪನಿಯ ಭವಿಷ್ಯದ ಬಗ್ಗೆ ಸೂಕ್ತ ಶಿಫಾರಸುಗಳನ್ನು ನೀಡಲು ಸಚಿವರ ಸಂಪುಟ ಉಪ ಸಮಿತಿಯನ್ನು ರಚಿಸಲಾಗಿದೆ.

ಇ) ಸದರಿ ಕಾರ್ಖಾನೆಯನ್ನು ಖಾಸಗೀಕರಣಗೊಳಿಸಲು ಸರ್ಕಾರವು ಒಪ್ಪಿದೆ. ಈ ಬಗ್ಗೆ ಸರ್ಕಾರಕ್ಕೆ ಸೂಕ್ತ ಪರಿಶೀಲನೆ ನಂತರ ಸಲಹೇ ನೀಡಿ ಕಂಪನಿಯು ಮೆ. ಅರ್ನಸ್ಟ ಮತ್ತು ಯ ಪ್ರೈ. ಲಿ; ಎಂಬ ಒಂದು ಜಾಗತಿಕ ಸಲಹಾ ಸಮಿತಿಯನ್ನು ನೇಮಿಸಲಾಗಿದೆ.

ರಾಜ್ಯದಲ್ಲಿ ಪಡಿತರ ವ್ಯವಸ್ಥೆ

2799 (3649) ಶ್ರೀ ಬಿ.ಎನ್. ಬಚ್ಚೇಗೌಡ (ಹೊಸಕೋಟೆ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಹಸಿರು ಮತ್ತು ಕೇಸರಿ ಕಾರ್ಡುದಾರರ ಕುಟುಂಬಗಳು ಎಷ್ಟು?

ಆ) ಹಸಿರು ಕಾರ್ಡುದಾರರಿಗೆ ಕೊಡುವ ಆಹಾರದ ಪ್ರಮಾಣ ಎಷ್ಟು ಮತ್ತು ಅದಕ್ಕೆ ತಗಲುವ ವೆಚ್ಚವೆಷ್ಟು?

ಇ) ಇವರ ಪರವಾಗಿ ಸರ್ಕಾರ ತುಂಬುವ ಸಬ್ಸಿಡಿಹಣ ಎಷ್ಟು?

ಈ) ಕೇಸರಿ ಕಾರ್ಡುದಾರರಿಗೆ ಕೊಡುವ ಆಹಾರದ ಪ್ರಮಾಣ ಎಷ್ಟು ಮತ್ತು ಅದಕ್ಕೆ ತಗಲುವ ವೆಚ್ಚವೆಷ್ಟು?

ಉ) ಹೊಸದಾಗಿ ಹಳದಿ ಕಾರ್ಡು ಕೊಡುವುದಾಗಿ ಘೋಷಿಸಲಾಗಿದೆಯೇ? ಅವರ ಆಯ್ಕೆ ಬಗ್ಗೆ ಸರ್ಕಾರ ರೂಪಿಸಿರುವ ನಿಯಮಗಳೇನು?

ಊ) ಹಳದಿ ಕಾರ್ಡುದಾರರಿಗೆ ಕೊಡುವ ಪಡಿತರ ಆಹಾರದ ಪ್ರಮಾಣ ಎಷ್ಟು ಮತ್ತು ಅದಕ್ಕೆ ತಗಲುವ ವೆಚ್ಚ ಎಷ್ಟು ಇದಕ್ಕೆ ಸರ್ಕಾರ ತುಂಬುವ ಸಬ್ಸಿಡಿಹಣ ಎಷ್ಟು?

ಋ) ಪಡಿತರ ವ್ಯವಸ್ಥೆಯಲ್ಲಿ ವಿತರಣೆ ಆಗುವ ಸೀಮೆಎಣ್ಣೆ ಪ್ರಮಾಣ ಎಷ್ಟು? ಲೀಟರ್ ಒಂದಕ್ಕೆ ಬೆಲೆ ಏನು?

ಋ) ಸರ್ಕಾರವು ಬೆಲೆ ಏರಿಕೆಯಿಂದ ತತ್ತರಿಸಿರುವ ಬಡವರಿಗೆ ಸಬ್ಸಿಡಿ ನೀಡುತ್ತಿದೆಯೇ?

ಶ್ರೀ ಬಿ. ಇನಾಂದಾರ್ (ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು) :

ಅ) ದಿನಾಂಕ 31-7-2000ದ ಅಂತ್ಯಕ್ಕೆ ರಾಜ್ಯದಲ್ಲಿ ವಿತರಿಸಿರುವ ಹಸಿರು ಮತ್ತು ಕೇಸರಿ ಪಡಿತರ ಚೀಟಿಗಳ ವಿವರ : ಹಸಿರು - 63,20,268 ಕೇಸರಿ - 20,62,637 (ಗ್ರಾಮಾಂತರ ಪ್ರದೇಶ)

ಪಟ್ಟಣ ಪ್ರದತೇಶಗಳಲ್ಲಿ ಕೇಸರಿ ಪಡಿತರ ಚೀಟಿಗಳಿಗೆ ಸಮಾನವಾದ 27,04,471 ಫೋಟೋ ಕಾರ್ಡುಗಳನ್ನು ಹಂಚಲಾಗಿದೆ.

ಆ) ದಿನಾಂಕ 1-4-2000ದಿಂದ ಜಾರಿಗೆ ಬಂದಿರುವಂತೆ ಹಸಿರು ಪಡಿತರ ಚೀಟಿದಾರರುಗಳಿಗೆ ಸಹಾಯಧನಯುಕ್ತ ಆಹಾರಧಾನ್ಯಗಳನ್ನು, ಪ್ರತಿ ಕಾರ್ಡಿಗೆ, ಪ್ರತಿ ಮಾಹೆಗೆ 16 ಕೆ.ಜಿ. ಅಕ್ಕಿ, 4 ಕೆ.ಜಿ ಗೋಧಿಯನ್ನು ವಿತರಿಸಲಾಗುತ್ತದೆ. 16 ಕೆ.ಜಿ. ಅಕ್ಕಿಯನ್ನು ಪಡೆಯಲು ರೂ. 98-40ಗಳು ಮತ್ತು 4 ಕೆ.ಜಿ. ಗೋಧಿಯನ್ನು ಪಡೆಯಲು ರೂ. 18-60ಗಳ ವೆಚ್ಚವಾಗುತ್ತದೆ.